೩

ಸರ್ ಪಿಪಾ: ಇಂಗ್ಲಿಷ್ ಇನ್ ಪ್ರೈಮರಿ ಟೆಕ್ಸ್ಟ್ ಬುಕ್ಸ್ – ರಿಮಿಲಿ ಭಟ್ಟಾಚಾರ್ಯ, ಅನುಜಾ ಮದನ್ ಇವರೊಂದಿಗೆ ಶ್ರೇಯೊಶಿ ಶೊರ್ಕಾರ್ ಮತ್ತು ನಿವೇದಿತಾ ಬಸು

– ಜೋಸೆಫ್ ಮಥಾಯ್ ಮತ್ತು ಸ್ನೇಹಲತಾ ಗುಪ್ತಾ

Sur Pipa: English in Primary Textbooks by Rimli Bhattacharya & Anuja Madan with Sreyoshi Sarkar and Nivedita Basu

ಪುಸ್ತಕ: ಸರ್ ಪಿಪಾ: ಇಂಗ್ಲಿಷ್ ಇನ್ ಪ್ರೈಮರಿ ಟೆಕ್ಸ್ಟ್ ಬುಕ್ಸ್

ಲೇಖಕರು: ರಿಮಿಲಿ ಭಟ್ಟಾಚಾರ್ಯ, ಅನುಜಾ ಮದನ್ ಇವರೊಂದಿಗೆ ಶ್ರೇಯೊಶಿ ಶೊರ್ಕಾರ್ ಮತ್ತು ನಿವೇದಿತಾ ಬಸು

ವರ್ಷ: ೨೦೧೨

ಪ್ರಕಟಣೆ: ಏಕಲವ್ಯ ಪ್ರಕಾಶನ ಭೋಪಾಲ್

* * *

ಪಠ್ಯಪುಸ್ತಕಗಳನ್ನು ಮೀರಿ ಹೋಗೋಣ

ಸಾರಾಂಶ: ಈ ಅಧ್ಯಯನವು ಇಂಗ್ಲಿಷ್ ಇನ್ ಪ್ರೈಮರಿ ಟೆಕ್ಸ್ಟ್‌ಬುಕ್ಸ್ ನ ಪರಿಚಯವಾಗಿದೆ. ನ್ಯಾಷನಲ್ ಕರಿಕ್ಯುಲಮ್ ಫ್ರೇಮ್ ವರ್ಕ್ ಮತ್ತು ನ್ಯಾಷನಲ್ ಫೋಕಸ್ ಗ್ರೂಪ್ ಪೊಸಿಷನ್ ಪೇಪರ್ ಇಂಗ್ಲಿಷ್ ಭಾಷಾ ಬೋಧನೆಗೆ ಶಿಫಾರಸು ಮಾಡಿದ ವಿಷಯಗಳು ಪ್ರಾಥಮಿಕ ತರಗತಿಗಳ, ೨೦೦೬–೨೦೦೮ರ ಎನ್‌ಸಿಇಆರ್‌ಟಿ ಇಂಗ್ಲಿಷ್ ಪಠ್ಯಪುಸ್ತಕಗಳಲ್ಲಿ ಹೇಗೆ ಸಾಕಾರಗೊಂಡಿದೆ ಎಂಬುದನ್ನು ಕುರಿತು ಈ ಪುಸ್ತಕ ಚರ್ಚಿಸುತ್ತದೆ. ಲೇಖಕರು ಇದನ್ನು ಎರಡು ರೀತಿಯಲ್ಲಿ ಉತ್ತರಿಸುತ್ತಾರೆ: (೧) ಪಠ್ಯದ ಭಾಗಗಳನ್ನು ವಿವರವಾಗಿ ಮತ್ತು ವಿಮರ್ಶಾತ್ಮಕ ದೃಷ್ಟಿಕೋನದಿಂದ (ವಿಮರ್ಶಾತ್ಮಕ ಮೈಕ್ರೊಲೆವೆಲ್ ಅನಾಲಿಸಿಸ್ ಎಂದು ಕರೆಯಲಾಗುತ್ತದೆ) ವಿಶ್ಲೇಷಿಸುವುದು. (೨) ತರಗತಿ ವೀಕ್ಷಣೆ ಮಾಡಿ ಇಂಗ್ಲಿಷ್

ಅನ್ನು ಹೇಗೆ ಕಲಿಸಲಾಗುತ್ತದೆ ಮತ್ತು ಪಠ್ಯಪುಸ್ತಕಕ್ಕೆ ವಿದ್ಯಾರ್ಥಿಗಳ ಪ್ರತಿಕ್ರಿಯೆ ಹೇಗಿದೆಯೆಂದು ಅರ್ಥಮಾಡಿಕೊಳ್ಳುವುದು. ಆದರೆ ಹೊಸ ಶಿಕ್ಷಣ ವಿಧಾನವನ್ನು ಪಠ್ಯಪುಸ್ತಕಗಳು ಅಸಮರ್ಪಕವಾಗಿ ಸೆರೆಹಿಡಿದಿವೆ. ಪಠ್ಯಪುಸ್ತಕವನ್ನು ಕಲಿಸುವ ವಿಧಾನದಿಂದಾಗಿ ಮಕ್ಕಳಿಗೆ ಪಠ್ಯದೊಂದಿಗೆ ಸಂವಹನ ನಡೆಸಲು ಬಹಳ ಕಡಮೆ ಸಮಯ ಸಿಗುತ್ತದೆ. ಆದ್ದರಿಂದ ಪಠ್ಯಪುಸ್ತಕದಾಚೆಗೆ ಹೋಗುವುದು ಅಪಶ್ಯವೆಂದು ಅಭಿಪ್ರಾಯ ಪಡುತ್ತಾರೆ.

ಪ್ರಮುಖ ಪದಗಳು: ಭಾಷಾ ಬೋಧನೆ– language teaching, ಮಕ್ಕಳ ಸಾಹಿತ್ಯ– children's literature, ಇಂಗ್ಲಿಷ್ ಪಠ್ಯ ಪುಸ್ತಕ– English Text Book.

ಮಕ್ಕಳೆಂದರೆ ಗಲಾಟೆ ಎಂಬ ಸಿದ್ಧಸೂತ್ರವನ್ನು ನಾವು ಎಲ್ಲೆಡೆ ಕಾಣುತ್ತೇವೆ. ಶಿಕ್ಷಕರು ತುಂಬಿದ ತರಗತಿಯಲ್ಲಿರುವ ಮಕ್ಕಳನ್ನು ಬಿಟ್ಟು ಹೋದರೆ ಆಗುವಂತಹ ಗಲಾಟೆಯ ಸದ್ದು ಪಕ್ಕದ ತರಗತಿಗೂ ತಲಪಿ, ಅವರೂ ಪಾಠವನ್ನು ಕೇಳಲು ತೊಂದರೆಯಾಗಬಹುದು. ಮಗುವೊಂದು ಶಿಕ್ಷಕರಿಂದ ಹಾಗೂ ದೊಡ್ಡವರಿಂದ ಬಹುಶಃ ಕೇಳಿಸಿಕೊಳ್ಳಬೇಕಾದ ಅತಿ ಸಾಮಾನ್ಯವಾದ ಮಾತೆಂದರೆ 'ಗಲಾಟೆ ಮಾಡಬೇಡ'!

ನಾವು ಒಂದು ಸಂದರ್ಭವನ್ನು ಕಲ್ಪಿಸಿಕೊಳ್ಳೋಣ. ಗಲಾಟೆಯಿಂದ ತುಂಬಿದ ತರಬೇತಿಯ ಚಿತ್ರ. ಶಿಕ್ಷಕರಾಗಿ ನೀವು ಸುಮ್ಮನೆ ತರಗತಿಯೊಳಗೆ ಬಂದು ಖಾಲಿ ಇರುವ ಒಂದು ಬೆಂಚಿನ ಮೇಲೆ ಕುಳಿತುಕೊಳ್ಳುತ್ತೀರಿ. ಸ್ವಲ್ಪ ಸಮಯದ ಅನಂತರ ನೀವು ಗಮನಿಸುವುದೇನೆಂದರೆ, ಈ ಗಲಾಟೆ ಎಂಬುದು, ಒಟ್ಟಿಗೆ ನಡೆಯುತ್ತಿರುವ ಹಲವಾರು ಸಂಭಾಷಣೆಗಳ ಮಿಶ್ರಣ ಎಂದು. ನಿಮ್ಮ ಸುತ್ತ ನಡೆಯುತ್ತಿರುವ ಕೆಲವು ಸಂಭಾಷಣೆಯನ್ನು ನೀವು ಗಮನಿಸುತ್ತೀರಿ. ಅದನ್ನು ಕೇಳಿಸಿಕೊಳ್ಳುತ್ತಾ ನೀವೂ ಅವರೊಡನೆ ಆ ಸಂಭಾಷಣೆಯಲ್ಲಿ ಸೇರಿಕೊಳ್ಳುತ್ತೀರಿ; ಮಕ್ಕಳು ಉದಾರವಾಗಿ ನಿಮ್ಮನ್ನು ಆ ಸಂಭಾಷಣೆಗೆ ಬರಮಾಡಿಕೊಳ್ಳುತ್ತಾರೆ. ನೀವು ಉತ್ತಮ ಸಂಭಾಷಣಾಕಾರ್ತಿ, ಮಾತುಕತೆಯಲ್ಲಿ ಜಾಣರು, ಹೀಗಾಗಿ ಅವರ ಸಂಭಾಷಣೆಯ ಎಳೆಯನ್ನು ಹಿಡಿದು, ಹಲವಾರು ವಿಚಾರಗಳು, ವಿಷಯಗಳು, ಕಥೆಗಳನ್ನು ಅದಕ್ಕೆ ಸಂಯೋಜಿಸುತ್ತಾ ಅವರೊಡನೆ ಮಾತನಾಡುತ್ತೀರಿ. ಸಂಭಾಷಣೆಗೆ ನೀವು ತಂದ ಎಳೆಯನ್ನು ಅವರು ತೆಗೆದುಕೊಂಡು ಅವರೂ ಸಹ ಮಾತನಾಡಲು ಪ್ರಾರಂಭಿಸುತ್ತಾರೆ. ನೀವು ಅವರಿಗೆ ತಿಳಿಯದ ರೀತಿಯಲ್ಲಿ ಸಂಭಾಷಣೆಯಿಂದ ಹೊರ ಬಂದು, ಕ್ಲಾಸಿನಲ್ಲಿ ಪ್ರಮುಖ ಜಾಗದಲ್ಲಿ ನಿಂತು, ಆ ಗುಂಪು ಮಾತನಾಡುತ್ತಿದ್ದ ವಿಚಾರವನ್ನು ಮತ್ತಿತರರಿಗೂ ಪರಿಚಯಿಸಿ, ಅನಂತರ ಅದೇ ವಿಷಯಕ್ಕೆ ಸೇರಿದ, ಪಠ್ಯಪುಸ್ತಕದಲ್ಲಿರುವ ಪಾಠವೊಂದಕ್ಕೆ ಅವರ ಗಮನವನ್ನು ಸೆಳೆಯುತ್ತೀರಿ.

ಇದು ಅಸಾಧ್ಯವೆನಿಸುವ ಸಂದರ್ಭವೆನಿಸಬಹುದು. ಆದರೆ ವಿದ್ಯಾರ್ಥಿಗಳ ಜಗತ್ತಿನೊಡನೆ ಪ್ರಸ್ತುತ ಶಿಕ್ಷಣ ಪದ್ಧತಿಯು ಯಾವುದೇ ರೀತಿಯಲ್ಲಿ ತೊಡಗಿಸಿಕೊಳ್ಳುತ್ತಿಲ್ಲ ಎಂಬುದು ನಮಗೆ ಇಲ್ಲಿ ಕಾಣುವ ಮುಖ್ಯಾಂಶ. ತರಗತಿಯ ಸಂದರ್ಭದಲ್ಲಿ, ಅಧಿಕಾರದ ಸ್ಥಾನದಲ್ಲಿರುವ ಶಿಕ್ಷಕ/ಕಿಯು, ಮಕ್ಕಳ ಜಗತ್ತಿನೊಳಗೆ ಪಠ್ಯಪುಸ್ತಕದಲ್ಲಿರುವ ವಿಚಾರಗಳನ್ನು ಬರಮಾಡಿಕೊಂಡು ಪ್ರವೇಶಿಸುವುದು ಉಪಯೋಗಕಾರಿಯಲ್ಲವೆ? ಇದರ ಬದಲಾಗಿ ಪಠ್ಯಪುಸ್ತಕದಲ್ಲಿರುವ ವಿಷಯವೊಂದನ್ನೇ ಆಧರಿಸಿದ ಜಗತ್ತೊಂದನ್ನು ತರಗತಿಯಲ್ಲಿ ನಿರ್ಮಿಸಿ, ಅದಕ್ಕೆ ವಿದ್ಯಾರ್ಥಿಗಳು ಸ್ಪಂದಿಸಬೇಕೆಂದು ಕಷ್ಟಪಡುವುದು ಏಕೆ?

ಇಲ್ಲಿ ವಿಮರ್ಶಿಸುತ್ತಿರುವ ಪುಸ್ತಕ ಇಂಗ್ಲಿಷ್ ಇನ್ ಪ್ರೈಮರಿ ಸ್ಕೂಲ್ ಟೆಕ್ಸ್ಟ್ ಬುಕ್ಸ್. ಇದು ತರಗತಿಯ ಬೋಧನಾ ಅಭ್ಯಾಸಗಳ ಕುರಿತು ಸಂಶೋಧನೆಯನ್ನು ಭಾರತದಲ್ಲಿ ಭಾಷಾ ಬೋಧನೆಯ ಸಾಹಿತ್ಯಕ್ಕೆ ಸಂಯೋಜಿಸುತ್ತದೆ. ಇದು ಅಪರೂಪದ ಮತ್ತು ಸ್ವಾಗತಾರ್ಹ ಪ್ರಯತ್ನವಾಗಿದೆ. ಈ ಪುಸ್ತಕವು ಮಕ್ಕಳ ಸಾಹಿತ್ಯ, ಅದರಲ್ಲೂ ಪ್ರಸ್ತುತವಾಗಿ ಎನ್‌ಸಿಇಆರ್‌ಟಿ (NCERT) ತಂದಿರುವಂತಹ ಇಂಗ್ಲಿಷ್ ಪುಸ್ತಕಗಳನ್ನು ಆಧರಿಸಿದ ಸಂಶೋಧನೆಯ ಫಲಿತಾಂಶವನ್ನು ನೀಡುತ್ತದೆ. ಈ ಸಂಶೋಧನೆಯನ್ನು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯ ಬೋಧನೆ ಮಾಡುತ್ತಿರುವ ಸಂಶೋಧಕರು ಮಾಡಿದ್ದಾರೆ.

ಮಕ್ಕಳ ಸಾಹಿತ್ಯವೆಂದು ಮಾತನಾಡುವಾಗ, ಸಾಮಾನ್ಯವಾಗಿ ಭಾರತದಲ್ಲಿ ಮಕ್ಕಳ ಹತ್ತಿರವಿರುವ ಏಕೈಕ ಪುಸ್ತವೆಂದರೆ ಪಠ್ಯಪುಸ್ತಕವೊಂದೇ. ಇಂಗ್ಲಿಷ್ ಇನ್ ಪ್ರೈಮರಿ ಟೆಕ್ಸ್ಟ್‌ಬುಕ್ಸ್ ಹಿಂದಿರುವ ಈ ಸಂಶೋಧನಾಕಾರರು, ಮಕ್ಕಳ ಸಾಹಿತ್ಯದ ಬಗ್ಗೆ ಸಂಶೋಧನೆಯನ್ನು ನಡೆಸುವಾಗ ಎನ್‌ಸಿಇಆರ್‌ಟಿ (NCERT) ಹೊರತಂದಿರುವ ಪ್ರಸ್ತುತ ಇಂಗ್ಲಿಷ್ ಪಠ್ಯಪುಸ್ತಕವನ್ನು ಆಯ್ದುಕೊಂಡಿರುವುದು ಸಂತಸದ ವಿಚಾರವಾಗಿದೆ. ಇದು ಬಹಳ ಪ್ರಸ್ತುತವಾದುದೇಕೆಂದರೆ, ಈ ಪಠ್ಯಪುಸ್ತಕಗಳನ್ನು ಒಂದು ಸಮಗ್ರ ಸಮೀಕ್ಷೆ ಹಾಗೂ ವಿಶ್ಲೇಷಣೆಯ ಅನಂತರ ೨೦೦೫ ರಲ್ಲಿ ನ್ಯಾಷನಲ್ ಫೋಕಸ್ ಗ್ರೂಪ್ ಪೊಸಿಶನ್ ಪೇಪರ್ಸ್ (ಎನ್ ಎಫ್ ಜಿ) ಹಾಗೂ ನ್ಯಾಷನಲ್ ಕರಿಕ್ಯುಲಂ ಫ್ರೇಂವರ್ಕ್ (ಎನ್ ಸಿ ಎಫ್) ಮೂಲಕ ಪ್ರಕಟಿಸಿ ಹೊರತರಲಾಯಿತು.

ಇಂಗ್ಲಿಷ್ ಇನ್ ಪ್ರೈಮರಿ ಟೆಕ್ಸ್ಟ್ ಬುಕ್ಸ್ ನ ಮೊದಲ ಭಾಗದಲ್ಲಿ ಅವರ ಕಾರ್ಯಕ್ಕೆ ಮಾರ್ಗದರ್ಶಕವಾಗಿದ್ದ ನೀತಿನಿರ್ಮಾಣವನ್ನು ವಿಶ್ಲೇಷಿಸುತ್ತದೆ. ಇಂಗ್ಲಿಷ್ ಬಗ್ಗೆ ಎನ್ ಎಫ್ ಜಿ ಹಾಗೂ ಎನ್ ಸಿ ಎಫ್‌ಯಲ್ಲಿ ಅಭಿವ್ಯಕ್ತಗೊಂಡಿರುವ

ಹೊಸ ಬೋಧನಾ ಕ್ರಮಗಳು ಪ್ರತಿಪಾದಿಸುವಂತಹ ವಿಚಾರಗಳನ್ನು ಹೇಗೆ ಪಠ್ಯಪುಸ್ತಕಗಳು ಪರಿಪೂರ್ಣವಾಗಿ ಸೆರೆಹಿಡಿದಿಲ್ಲವೆಂದೂ ಸಂಶೋಧನೆಯು ತೋರಿಸಿಕೊಡುತ್ತದೆ.

ಎರಡನೆಯ ಭಾಗದಲ್ಲೂ ಸಹ ಮೊದಲು ಹೇಳಿರುವ ವಿಚಾರವನ್ನೇ ಸೂಚಿಸುತ್ತಾ, ಹೇಗೆ ಪಠ್ಯಪುಸ್ತಕವನ್ನು ಇನ್ನಷ್ಟು ಕಲ್ಪನಾಶೀಲವಾಗಿ ಹಾಗೂ ಸೂಕ್ಷ್ಮತೆಯಿಂದ ರೂಪಿಸಬಹುದಿತ್ತು ಎಂದು ಹೇಳಲಾಗಿದೆ. ಇದು ಪುಸ್ತಕಗಳನ್ನು ವಿಮರ್ಶಿಸಿ, ನಿರ್ದಿಷ್ಟ ಪಾಠಗಳನ್ನು ವಿವರವಾಗಿ ವಿಶ್ಲೇಷಿಸುತ್ತದೆ. ಪಠ್ಯವನ್ನಾಗಿ ಆರಿಸಿಕೊಂಡಿರುವ ಬರಹಗಳು ಬಹಳ ಸಪ್ಪೆಯಾಗಿವೆ. ಪ್ರೇಮ್ ಚಂದ್ ಅವರ 'ಬಡೇ ಬಾಯೀಸಾಬ್' ಅಂತಹ ಶ್ರೇಷ್ಠ ಕೃತಿಯನ್ನು (ಪಠ್ಯಪುಸ್ತಕದಲ್ಲಿ ಇದಕ್ಕೆ ಅನಾವಶ್ಯಕವಾಗಿ ದಿ ಎಲ್ಡರ್ ಬ್ರದರ್ ಎಂಬ ಶೀರ್ಷಿಕೆಯನ್ನು ಕೊಡಲಾಗಿದೆ, ಹೊಸನೀತಿ ದಾಖಲೆಗಳಲ್ಲಿ ಬಹುಭಾಷೆಗೆ ಪ್ರಾಮುಖ್ಯ ನೀಡಬೇಕೆಂದಿದ್ದರೂ ಹೀಗೆ ಮಾಡಲಾಗಿದೆ) ಅಳವಡಿಸುವಾಗ ಅದನ್ನು ಏಕಮುಖೀಗೊಳಿಸಿ ಕಥೆಯಿಂದ ಕಲಿಯಬಹುದಾದ ಕೇವಲ ಒಂದು ನೀತಿಯ ಬಗ್ಗೆ ಮಾತ್ರ ಒತ್ತು ನೀಡಲಾಗಿದೆ. ವಿದ್ಯಾರ್ಥಿಗಳು ತಮ್ಮದೇ ರೀತಿಯಲ್ಲಿ ಅದನ್ನು ಓದಿಕೊಳ್ಳಲು ಹಾಗೂ ಅದನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುವಂತಹ ಅನೇಕ ಪದರಗಳನ್ನುಳ್ಳ ಪಠ್ಯವನ್ನಾಗಿ ಅದನ್ನು ಮಾಡಬಹುದಿತ್ತು. ಪಠ್ಯವನ್ನಾಧರಿಸಿದ ಪ್ರಶ್ನೆಗಳು ಹೆಚ್ಚು ಅದರ ಅರ್ಥ ಗ್ರಹಿಕೆ ಹಾಗೂ ಓದಿದ್ದನ್ನು ನೆನಪಿಸಿಕೊಳ್ಳುವುದಕ್ಕೆ ಮಾತ್ರ ಸೀಮಿತಗೊಂಡಿವೆ. ಮುಕ್ತವಾದ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳು ಪಠ್ಯದ ಜೊತೆ ಆಪ್ತವಾಗಿ ತೊಡಗುವಂತಹ, ಅಥವಾ ಪ್ರತಿ ವಿದ್ಯಾರ್ಥಿಯೂ ತನ್ನದೇ ಆದ ರೀತಿಯಲ್ಲಿ ಉತ್ತರಿಸಬಹುದಾದ, ಬಹು ಸಾಧ್ಯತೆಯುಳ್ಳ ಒಂದು ಪ್ರಶ್ನೆಯೂ ಇಲ್ಲ.

ಉತ್ತಮ ನೀತಿಯೊಂದು ಅನುಷ್ಠಾನದ ಹಂತಕ್ಕೆ ಬಂದಾಗ ಸೂಕ್ತವಾಗಿ ನೆರವೇರುವುದಿಲ್ಲ ಎಂಬ ಸುಪರಿಚಿತ ಆದರೆ ಬೇಸರದ ವಿಚಾರವನ್ನು ಮೊದಲ ಎರಡು ಭಾಗಗಳು ತೋರಿಸುತ್ತವೆ. ಮೂರನೆಯ ಭಾಗವು, ಪಠ್ಯಪುಸ್ತಕವನ್ನು ಹೇಗೆ ತರಗತಿಯಲ್ಲಿ ಅರ್ಥೈಸಲಾಗುತ್ತದೆ ಎಂಬ ಬಹು ಮುಖ್ಯ ವಿಚಾರವನ್ನು ಗಮನಿಸುತ್ತದೆ. ಒಟ್ಟಾರೆ ಮೂರು ಸಂದರ್ಭಗಳಿದ್ದು, ಅದರಲ್ಲಿನ ಎರಡರಲ್ಲಿ ತರಗತಿಯು ನಿರ್ಬಂಧಗಳಿಂದ ಕೂಡಿದ್ದವು ಎಂದು ಗಮನಿಸುತ್ತದೆ. ಕಾರಣ, ಆ ತರಗತಿಗಳಲ್ಲಿ ಶಿಕ್ಷಕ/ಕಿಯ ಪ್ರಾಬಲ್ಯವೇ ಹೆಚ್ಚಿತ್ತು. ಬಂಗಾಳಿ ಮಾತನಾಡುವ ಮಗುವೊಂದು ಪಠ್ಯವನ್ನು ಓದುವಾಗ ಸಾಕಷ್ಟು ಬಾರಿ ಶಿಕ್ಷಕಿಯು ಉಚ್ಚಾರಣೆಯನ್ನು ಪದೆಪದೇ ತಿದ್ದುತ್ತಿದ್ದರು. ಮೂರನೆಯ ಭಾಗದಲ್ಲಿ ಶಿಕ್ಷಕಿಯ ಉಪಸ್ಥಿತಿಯಲ್ಲೇ ಸಂಶೋಧಕರು ವಿದ್ಯಾರ್ಥಿಗಳ ನಡುವಿನ ಸಂಭಾಷಣೆಯಲ್ಲಿ ಭಾಗವಹಿಸಿದ್ದನ್ನು ದಾಖಲಿಸುತ್ತಾರೆ.

ಸಾಮಾನ್ಯವಾಗಿ ಶಿಕ್ಷಕಿ ಮಕ್ಕಳನ್ನು ಶಿಕ್ಷಿಸುತ್ತಾರಾದರೂ, 'ತರಗತಿಯನ್ನು ಗಮನಿಸಲು ಬಂದವರ ಅನಿಸಿಕೆ ಮೇಲೆ ಅದು ಮಾಡಬಹುದಾದ ಪ್ರಭಾವದ ಆತಂಕದಿಂದ' ಮಕ್ಕಳ ಜೊತೆ ಕಠಿಣವಾಗಿ ವರ್ತಿಸಲಿಲ್ಲ ಎಂದು ತಿಳಿಸುತ್ತಾರೆ. ಹೀಗಾಗಿ ವಿದ್ಯಾರ್ಥಿಗಳ ನಡುವಿನ ಸಂಭಾಷಣೆಯನ್ನು ಗಮನಿಸಿದಾಗ, ವಿದ್ಯಾರ್ಥಿಗಳು ಕಲಿತ ಪಾಠವನ್ನು ಹೇಗೆ ತಮ್ಮ ಬದುಕಿಗೆ ನೇರವಾಗಿ ಉಪಯೋಗಿಸಿಕೊಂಡರೆಂಬುದನ್ನು ಸಂಶೋಧಕರು ಗಮನಿಸಲು ಸಾಧ್ಯವಾಯಿತು. ಪಾಠವು ಪಿನೋಚ್ಚಿಯೋ ಕುರಿತಾದ್ದರಿಂದ, ವಿದ್ಯಾರ್ಥಿಯೊಬ್ಬ ತನ್ನ ಸಹಪಾಠಿಗೆ ' ನಿನ್ನೆ ಪಿನೋಚ್ಚಿಯೋ ಟಿ ವಿ ಯಲ್ಲಿ ಬರುತ್ತಿತ್ತು, ನೋಡಿದೆಯಾ?' ಎಂದು ಕೇಳುತ್ತಾನೆ. ಹಲವಾರು ಸಂಭಾಷಣೆಗಳಲ್ಲಿ ಆಗುವಂತೆ ಇಲ್ಲಿ ಸಹ, ಮಾತು 'ಆಸಕ್ತಿದಾಯಕ ವಿಚಾರಗಳ' ಕಡೆ ತಿರುಗುತ್ತದೆ. ಗಮನಿಸಲು ಬಂದ ಸಂಶೋಧಕರನ್ನು 'ನೀವು ಸ್ಪೀಡ್ ರೇಸರ್ ಅಥವಾ ಸ್ಪೈಡರ್ ಮಾನ್ ನೋಡ್ತೀರಾ?' ಎಂದು ವಿದ್ಯಾರ್ಥಿಯು ಕೇಳುತ್ತಾನೆ, ಅದೇ ಮಗು ಸಂಶೋಧಕರು ತನ್ನ ಮನೆಯ ಮೇಲೆ ವಾಸವಾಗಿದ್ದಾರೆಂದು, ಅವರನ್ನು ಮಗುವಾಗಿದ್ದಾಗನಿಂದಲೂ ಬಲ್ಲನೆಂದು ಹೇಳುತ್ತಾನೆ. ನಿಜವೇನೆಂದರೆ, ಮಕ್ಕಳು ಇದೊಂದೇ ಒಡನಾಟದಲ್ಲಿ ಸಂಶೋಧಕರ ಮೂಲಕ ಮಾತನಾಡಲು ಪ್ರಯತ್ನಿಸಿದ್ದು ಹಾಗೂ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದು.

ಈ ಲೇಖನದ ಮೊದಲಿನಲ್ಲಿ ವಿವರಿಸಲಾದ ಕಾಲ್ಪನಿಕ ಸನ್ನಿವೇಶದಂತೆ, ಪಠ್ಯ ಪುಸ್ತಕವನ್ನು ಕೇವಲ ಸಂಭಾಷಣೆಯನ್ನು ಪ್ರಾರಂಭಿಸುವ ಮೊದಲ ಹೆಜ್ಜೆಯಾಗಿ ಉಪಯೋಗಿಸಿಕೊಂಡು ಅಥವಾ ಅದಕ್ಕಿಂತ ಮಿಗಿಲಾಗಿ ಈಗಾಗಲೆ ನಡೆಯುತ್ತಿರುವ ಸಂಭಾಷಣೆಗೆ ಕೊಡುಗೆಯನ್ನು ನೀಡುವಂತಹ ಅಂಶವನ್ನಾಗಿ ಉಪಯೋಗಿಸಬಹುದು. ಆಗ ನಾವು ಪಠ್ಯದ ಗುಣಮಟ್ಟದ ಮೇಲೆ ಅವಲಂಬಿತರಾಗಬೇಕಿಲ್ಲ. ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ನಡುವಿನ ಸಂಭಾಷಣೆಯು ಪಠ್ಯಪುಸ್ತಕವನ್ನು ಮೀರಿ ಅನೇಕ ವಿಚಾರಗಳಿಗೆ ತಲಪಬಹುದು. ಇದರ ಅರ್ಥ ಪಠ್ಯಪುಸ್ತಕವನ್ನು ರಚಿಸುವವರು, ಪ್ರಕಟಿಸುವವರು ಏನು ಬೇಕಾದರೂ ಬರೆಯಬಹುದೆಂದಲ್ಲ, ನಿಜವೆಂದರೆ ಅದಕ್ಕೆ ವ್ಯತಿರಿಕ್ತವಾದುದನ್ನು ನಾನಿಲ್ಲಿ ಹೇಳುತ್ತಿದ್ದೇನೆ. ಪಠ್ಯಪುಸ್ತಕದ ಪ್ರಕಾಶಕರು ತಮ್ಮ ಪುಸ್ತಕವನ್ನು ಓದುವ ಪ್ರತಿಯೊಬ್ಬರನ್ನು ವಿಮರ್ಶಕರನ್ನಾಗಿ ನೋಡಿದರೆ ಹಾಗೂ ತಮ್ಮ ಪುಸ್ತಕವನ್ನು ವಿಮರ್ಶಾತ್ಮಕವಾಗಿ ಓದುತ್ತರೆಂದಾದರೆ, ಆಗ ಅವರು ಏನನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಕಲ್ಪಿಸಿಕೊಳ್ಳಿ!

* * *

ಚಿಂತನಾತ್ಮಕ ಪ್ರಶ್ನೆಗಳು:

೧. ಕ್ಲಾಸಿನಲ್ಲಿ ಮಕ್ಕಳು ಪರಸ್ಪರ ನಡೆಸುವ ಸಂಭಾಷಣೆಯನ್ನು ಶಿಕ್ಷಕರು ಪಠ್ಯವನ್ನು ಬೋಧಿಸಲು ಉಪಯೋಗಿಸಬಹುದು ಎಂದು ಈ ಪುಸ್ತಕ ವಿಮರ್ಶೆಯಲ್ಲಿ ಹೇಳಲಾಗಿದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

೨. ತರಗತಿಯಲ್ಲಿ ಪಠ್ಯಪುಸ್ತಕವನ್ನು ಹೇಗೆ ನಿರ್ವಹಿಸಲಾಗುತ್ತಿದೆ?

೩. ಲೇಖನದಲ್ಲಿ ತಿಳಿಸಿರುವ ಸಂಶೋಧನೆಯಿಂದ ಭಾಷಾ ಕಲಿಕೆಯ ಬಗ್ಗೆ ಹೊರಬರುವ ಮುಖ್ಯ ವಿಚಾರವೇನು?

೪. ನೀವು ತರಗತಿಯಲ್ಲಿ ಮಕ್ಕಳೊಡನೆ ಮಾತನಾಡಿ ಮತ್ತು ಆ ಸಂಭಾಷಣೆಯನ್ನೇ ಹೇಗೆ ಕಲಿಕೆಯ ಮೆಟ್ಟಿಲಾಗಿಸಬಹುದೆಂಬುದನ್ನು ದಾಖಲಿಸಿ.

೫. ಪಠ್ಯಪುಸ್ತಕಗಳಿಲ್ಲದಿದ್ದರೆ ಭಾಷೆ ಕಲಿಸಲಾಗುವುದಿಲ್ಲವೇ? ವಿಚಾರ ಮಾಡಿ.

ಜೋಸೆಫ್ ಮಥಾಯ್: ಮೂವತ್ತಕ್ಕಿಂತ ಹೆಚ್ಚು ವರ್ಷಗಳು ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಪರಿಸರ, ನಾಗರಿಕ ಹಕ್ಕುಗಳು, ರಂಗಭೂಮಿಯಲ್ಲಿ ಸಕ್ರಿಯರಾಗಿದ್ದಾರೆ, ರಾಜಕೀಯ ಕಾರ್ಯಕರ್ತರಾಗಿದ್ದಾರೆ. ಪುಸ್ತಕ ಪ್ರಕಟಣೆಯ ವೃತ್ತಿಯಲ್ಲಿ ೨೦ ವರ್ಷಗಳಿಂದ ತೊಡಗಿಕೊಂಡಿದ್ದಾರೆ. ಪರ್ಯಾಯ ಶಿಕ್ಷಣ ಮಾರ್ಗದಲ್ಲಿ ಕೆಲಸ ಮಾಡುವ ಅಂಕುರ್ ಸೊಸೈಟಿಯ ಸಲಹೆಗಾರರಾಗಿದ್ದಾರೆ. jomathai@gmail.com

ಸ್ನೇಹ ಲತಾ ಗುಪ್ತಾ: ಇಂಗ್ಲಿಷ್ ಪ್ರಾಧ್ಯಾಪಕರು, ರಾಜ್‌ಕೀಯ ಪ್ರತಿಭಾ ವಿದ್ಯಾಲಯ, ಸೂರಜ್ ಮಾಲ್ ವಿಹಾರ್, ದೆಹಲಿ, ಶಿಕ್ಷಕರ ತರಬೇತಿ, ನಿರ್ಣಾಯಕ/ನಿರ್ಧಾರಕ ಸಾಕ್ಷರತೆ ಹಾಗೂ ಸಂಶೋಧನೆ ಅವರ ಆಸಕ್ತಿಯ ವಿಷಯಗಳು. snehlatag@gmail.com

ಅನುವಾದ: ಉಷಾ ಬಿ ಎನ್ / **ಪರಿಶೀಲನೆ:** ದೇವಕಿ ಲಕ್ಷ್ಮೀನಾರಾಯಣ್

ಮೂಲ: *Language and Language Teaching,* Volume 1 Number 2 Issue 4 July 2013.

❑